ಬಾಲಿವುಡ್

# ಝೈರಾ - ದಿ ಸ್ಟಾರ್



ಝೈರಾ ವಾಸಿಮ್ ಎಂಬ 16ರ ಹರೆಯದ ಬಾಲೆ ಬಾಲಿವುಡ್‌ನಲ್ಲಿ ಅದೃಷ್ಟದ ಪುಷ್ಪಕ ವಿಮಾನ ಏರಿ ಹೊರಟಿದ್ದಾಳೆ. ಕಳೆದ ವರ್ಷ ಬಿಡುಗಡೆಯಾದ ಅಮೀರ್ ಖಾನ್ ಅಭಿನಯದ 'ದಂಗಲ್' ಚಿತ್ರದಲ್ಲಿ ಕುಸ್ತಿಪಟುವಾಗಿ ಮಿಂಚಿದ ಝೈರಾ, ಈಗ ಅಮೀರ್ ನಿರ್ಮಾಣದ ಹೊಸ ಚಿತ್ರ 'ಸೀಕ್ರೆಟ್ ಸೂಪರ್‌ಸ್ಟಾರ್' ಚಿತ್ರದ ಮೊದಲ ಹಾಡಿನಲ್ಲಿ ಕಾಣಿಸಿಕೊಂಡಿದ್ದು, ಈ ಹಾಡು ಸಾಮಾಜಿಕ ಜಾಲತಾಣಗಳಲ್ಲಿ ಅತ್ಯಧಿಕ ಮೆಚ್ಚುಗೆ ಗಳಿಸಿದೆ. 16ರ ಹರೆಯದ ಹುಡುಗಿಯೊಬ್ಬಳು ಮನೆಯವರ ವಿರೋಧದ ನಡುವೆಯೇ ಗಾಯಕಿಯಾಗಲು ಸೋಷಿಯಲ್ ಮೀಡಿಯಾ ಮೂಲಕ ರಹಸ್ಯವಾಗಿ ಹೊರಡುವುದು ಚಿತ್ರದ ಕಥೆ. 'ಮೈ ಕೌನ್ ಹೂಂ' ಎಂಬ ಈ ಹಾಡನ್ನು 16ರ ಹರೆಯದ ಮೇಘನಾ ಮಿಶ್ರಾ ಎಂಬ ಹೊಸ ಗಾಯಕಿ ಹಾಡಿರುವುದು ಕೂಡಾ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಅರ್ಧ ಕಾಶ್ಮೀರಿ, ಅರ್ಧ ಪಂಜಾಬಿ ಆಗಿರುವ ಝೈರಾ ಶ್ರೀನಗರದಲ್ಲಿ ಇನ್ನೂ 10ನೇ ತರಗತಿ ವಿದ್ಯಾರ್ಥಿನಿ. ಜಮ್ಮು ಕಾಶ್ಮೀರ ಬ್ಯಾಂಕಿನಲ್ಲಿ ಆಕೆಯ ಅಪ್ಪ ಎಕ್ಸಿಕ್ಯೂಟಿವ್ ಮ್ಯಾನೇಜರ್. ಆದರೆ ಬಾಲಿವುಡ್‌ನಲ್ಲಿ ಈಕೆ ಈಗಾಗಲೆ ಗಟ್ಟಿ ಹೆಜ್ಜೆಗಳನ್ನು ಊರಿದ್ದಾಳೆ. 'ದಂಗಲ್' ಅಭಿನಯಕ್ಕೆ ಅತ್ಯುತ್ತಮ ಪೋಷಕ ನಟಿ ರಾಷ್ಟ್ರಪ್ರಶಸ್ತಿ ಗೆದ್ದಿರುವ ಝೈರಾ ಈಗ 10 ಲಕ್ಷ ಡಾಲರ್ ಆದಾಯ ಹೊಂದಿರುವಾಕೆ. 70 ಲಕ್ಷ ರೂಪಾಯಿ ಬೆಲೆಯ ಮರ್ಸಿಡಿಸ್ ಕಾರು ಮತ್ತು 60 ಲಕ್ಷದ ಆಡಿ ಕಾರು ಹೊಂದಿರುವ ಝೈರಾ, ಎರಡನೇ ಚಿತ್ರ ಮುಂದಿನ ತಿಂಗಳು ತೆರೆಗೆ ಬರುವ ಹೊತ್ತಿಗೆ ಇನ್ನಷ್ಟು ಶ್ರೀಮಂತೆ ಆಗುವುದು ಖಚಿತ. 'ಸೀಕ್ರೆಟ್ ಸೂಪರ್‌ಸ್ಟಾರ್' ಚಿತ್ರದ ಪಾತ್ರ ಆಕೆಗೆ ಇನ್ನಷ್ಟು ಪ್ರಶಸ್ತಿಗಳನ್ನು ತರುವ ನಿರೀಕ್ಷೆಯೂ ಇದೆ.



# ಶಾರೂಕ್ ಗಳಿಸಿದ್ದು ಎಷ್ಟು?

2017ರಲ್ಲಿ ಚಿತ್ರನಟರು ಒಟ್ಟಾರೆ ಗಳಿಸಬಹುದಾದ ಆದಾಯದ 'ಟಾಪ್ ಟೆನ್' ಪಟ್ಟಿಯೊಂದನ್ನು ಫೋರ್ಬ್ಸ್ ಇತ್ತೀಚೆಗೆ ಬಿಡುಗಡೆ ಮಾಡಿದೆ. ಹಾಲಿವುಡ್ ನಟ ಮಾರ್ಕ್ ವಾಲ್ಬರ್ಗ್ 68 ದಶಲಕ್ಷ ಡಾಲರ್ ಒಟ್ಟು ಗಳಿಕೆಯೊಂದಿಗೆ (ಸುಮಾರು 500 ಕೋಟಿ ರೂಪಾಯಿ) 'ಟಾಪ್ ಟೆನ್' ಪಟ್ಟಿಯ ಮೊದಲ ಸ್ಥಾನದಲ್ಲಿದ್ದರೆ, ನಮ್ಮ ಬಾಲಿವುಡ್‌ನ ಶಾರೂಕ್ ಖಾನ್, ಸಲ್ಮಾನ್ ಖಾನ್ ಮತ್ತು ಅಕ್ಷಯ ಕುಮಾರ್ ಕ್ರಮವಾಗಿ 8, 9 ಮತ್ತು 10ನೇ ಸ್ಥಾನದಲ್ಲಿದ್ದಾರೆ.

ಶಾರೂಕ್ ಗಳಿಕೆ ಈ ವರ್ಷ 243.50 ಕೋಟಿ ರೂಪಾಯಿ ಎಂದು ಅಂದಾಜಿಸಿದ್ದರೆ, ಸಲ್ಮಾನ್ ಖಾನ್ 237 ಕೋಟಿ ಮತ್ತು ಅಕ್ಷಯ ಕುಮಾರ್ 227.5 ಕೋಟಿ ರೂಪಾಯಿ ಆದಾಯ ಪಡೆಯಲಿದ್ದಾರೆ. ಶಾರೂಕ್‌ನ 'ಜಬ್ ಹ್ಯಾರಿ ಮೆಟ್ ಸೆಜಲ್' ಚಿತ್ರ ಎರಡನೇ ವಾರದ ಬಳಿಕ ಬಾಕ್ಸಾಫೀಸ್‌ನಲ್ಲಿ ಮುಗ್ಗರಿಸಿದೆ. ಅಕ್ಷಯನ ಚಿತ್ರ 'ಟಾಯ್ಲೆಟ್– ಏಕ್ ಪ್ರೇಮ್ ಕಥಾ' ಕಳೆದ ವಾರ 100 ಕೋಟಿ ರೂಪಾಯಿ ಕಲೆಕ್ಷನ್ ಕ್ಲಬ್‌ಗೆ ಸೇರ್ಪಡೆಯಾಗಿದೆ.

■ ಬಿಂದು